**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ</u>**

<u>ಸಿ.ಸಿ. ನಂ.40/2013</u>

PW-1

| | | |
|---|---|---|
| ಹೆಸರು | :- | ಹೆಚ್.ಎಸ್.ಉಮೇಶ್ |
| ತಂದೆ ಹೆಸರು | :- | ಲೇಟ್ ಶಂಕರಯ್ಯ |
| ವಯಸ್ಸು | :- | 62 ವರ್ಷ |
| ವೃತ್ತಿ | :- | ನಿವೃತ್ತ ಎ.ಎಸ್.ಐ., |
| ವಾಸ ಸ್ಥಳ | :- | ವಡೇರಹಳ್ಳಿ, ರಾಮನಗರ |
| ದಿನಾಂಕ | :- | 27.07.2023 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಕಲಂ 299 ಸಿ.ಆರ್.ಪಿ.ಸಿ ಅಡಿಯಲ್ಲಿ ಸಾಕ್ಷಿಯ ವಿಚಾರಣೆ :-</u>

ದಿನಾಂಕ 16.08.2017 ರಿಂದ ದಿನಾಂಕ 31.09.2021 ರವರೆಗೆ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಪ್ರಸ್ತುತ ಪ್ರಕರಣದಲ್ಲಿ ನ್ಯಾಯಾಲಯದಿಂದ 3 ನೇ ಆರೋಪಿ ಸುರೇಶ್ ಅಲಿಯಾಸ್ ಶಿವರಾಜು ಅಲಿಯಾಸ್ ಸೂರಿ, ವಿರುದ್ಧ ಉದ್ಘೋಷಣಾ ವಾರಂಟ್ ಜಾರಿ ಮಾಡುವ ಸಂಬಂಧ ನಮ್ಮ ಪಿ.ಎಸ್.ಐ ರವರ ಆದೇಶದ ಮೇರೆಗೆ ದಿನಾಂಕ 19.08.2018 ರಂದು ತಮಿಳುನಾಡು ರಾಜ್ಯ, ಕೃಷ್ಣಗಿರಿ ಜಿಲ್ಲೆ, ಸೂಲಗಿರಿ ತಾಲ್ಲೂಕು, ವೆಂಕಟೇಶ್ವರಂ ಅಂಚೆ, ಉತ್ತನಪಲ್ಲಿ ಗ್ರಾಮದಲ್ಲಿರುವ ಮಾರಮ್ಮ ದೇವಸ್ಥಾನದ ಹಿಂಭಾಗದಲ್ಲಿರುವ ಆಪಾದಿತನ ಮನೆಯ ಮುಂಭಾಗ ಹೋಗಿ ನೋಡಲಾಗಿ ಆತನ ಮನೆಗೆ ಬೀಗ ಹಾಕಲಾಗಿದ್ದು, ಆತನ ತಂದೆ ಇದ್ದು ಆ ಸಮಯದಲ್ಲಿ ಅವರು ಗಾರೆ ಕೆಲಸಕ್ಕೆ ಹೋಗಿರುವುದಾಗಿ ಅವರ ಪಕ್ಕದ

ಮನೆಯವರು ತಿಳಿಸಿದ್ದು ಹಾಗೂ 3 ನೇ ಆರೋಪಿ ಸುಮಾರು 3-4 ವರ್ಷಗಳ ಹಿಂದೆ ತನ್ನ ತಂದೆಯೊಂದಿಗೆ ಜಗಳ ಮಾಡಿಕೊಂಡು ಮನೆ ಬಿಟ್ಟು ಹೋಗಿರುವುದಾಗಿ ತಿಳಿಸಿದ್ದು, ಸ್ಥಳದಲ್ಲಿ ಮಾದೇಶ ಬಿನ್ ಗೋವಿಂದಪ್ಪ ಹಾಗೂ ಮುನಿಯಪ್ಪ ಬಿನ್ ಚಿನ್ನಪ್ಪಯ್ಯಪ್ಪ ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಉದ್ಘೋಷಣಾ ವಿಚಾರವನ್ನು ತಿಳಿಸಿ, ಸ್ಥಳದಲ್ಲಿ ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ಉದ್ಘೋಷಣಾ ಪ್ರತಿಯನ್ನು ತೆಗೆದುಕೊಂಡು ಟಾಂ ಟಾಂ ಮೂಲಕ ಸ್ಥಳೀಯರಿಗೆ ಪ್ರಚಾರಪಡಿಸಿ ಉದ್ಘೋಷಣಾ ಪ್ರತಿಯನ್ನು ಅಂಗನವಾಡಿ ಕೇಂದ್ರ, ದೇವಸ್ಥಾನ, ಬಸ್ ನಿಲ್ದಾಣಗಳಲ್ಲಿ ಅಂಟಿಸಿ 3 ನೇ ಆರೋಪಿ ಪತ್ತೆಯಾದ ಪಕ್ಷದಲ್ಲಿ ದಿನಾಂಕ 20.09.2018 ರಂದು ಆತನನ್ನು ನ್ಯಾಯಾಲಯಕ್ಕೆ ಅಥವಾ ನಮ್ಮ ಪೊಲೀಸ್ ಠಾಣೆಗೆ ಹಾಜರುಪಡಿಸುವಂತೆ ಅಲ್ಲಿದ್ದ ಪಂಚರಿಗೆ, ಸಾರ್ವಜನಿಕರಿಗೆ ಹಾಗೂ ಅಲ್ಲಿನ ಪೊಲೀಸರಿಗೆ ತಿಳಿಸಿರುತ್ತೇನೆ.

3. ಈ ಪ್ರಕರಣದಲ್ಲಿನ 3 ನೇ ಆರೋಪಿಯ ವಿರುದ್ಧ ನ್ಯಾಯಾಲಯದಿಂದ ಹೊರಡಿಸಲಾಗಿದ್ದ ಉದ್ಘೋಷಣಾ ವಾರೆಂಟನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಅದನ್ನು **ನಿಪಿ-**1 ಎಂದು, ದಿನಾಂಕ 19.08.2018 ರ ಉದ್ಘೋಷಣಾ ಪಂಚನಾಮೆಯನ್ನು **ನಿಪಿ-**2 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ-**2**(ಎ)** ಎಂದು ಗುರುತಿಸಲಾಯಿತು.

4. ಪ್ರಸ್ತುತ ಪ್ರಕರಣದಲ್ಲಿ ನ್ಯಾಯಾಲಯದಿಂದ 2 ನೇ ಆರೋಪಿ ಉಮೇಶ್ ಬಿನ್ ಗುರುಸಿದ್ದಪ್ಪರವರ ವಿರುದ್ಧ ಉದ್ಘೋಷಣಾ ವಾರಂಟ್ ಜಾರಿ ಮಾಡುವ ಸಂಬಂಧ ನಮ್ಮ ಪಿ.ಎಸ್.ಐ ರವರ ಆದೇಶದ ಮೇರೆಗೆ ದಿನಾಂಕ

20.08.2018 ರಂದು ಬೆಂಗಳೂರು, ಮಾರತಹಳ್ಳಿ, ವಾಗ್ದೇವಿ ಶಾಲೆಯ ಮುಂಭಾಗ 2 ನೇ ಆರೋಪಿ ಬಗ್ಗೆ ವಿಚಾರಿಸಿ ಗುರಪ್ಪ ಬಿನ್ ಲೇಟ್ ತಿಮ್ಮಣ್ಣ ಹಾಗೂ ಉಮೇಶ್ ಬಿನ್ ಬೆಳ್ಳಿಯಪ್ಪ ಎಂಬ ಪಂಚರನ್ನು ಬರಮಾಡಿಕೊಂಡು ಉದ್ಘೋಷಣಾ ವಿಚಾರವನ್ನು ತಿಳಿಸಿ, ಸ್ಥಳದಲ್ಲಿ ಮಧ್ಯಾಹ್ನ 3.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ಉದ್ಘೋಷಣಾ ಪ್ರತಿಯನ್ನು ತೆಗೆದುಕೊಂಡು ಟಾಂ ಟಾಂ ಮೂಲಕ ಸ್ಥಳೀಯರಿಗೆ ಪ್ರಚಾರಪಡಿಸಿ ಉದ್ಘೋಷಣಾ ಪ್ರತಿಯನ್ನು ಶಾಲೆಯ ಮುಂಭಾಗದಲ್ಲಿ, ಅಂಗನವಾಡಿ ಕೇಂದ್ರ, ಬಸ್ ನಿಲ್ದಾಣಗಳಲ್ಲಿ ಅಂಟಿಸಿ 2 ನೇ ಆರೋಪಿ ಪತ್ತೆಯಾದ ಪಕ್ಷದಲ್ಲಿ ದಿನಾಂಕ 20.09.2018 ರಂದು ಆತನನ್ನು ನ್ಯಾಯಾಲಯಕ್ಕೆ ಅಥವಾ ನಮ್ಮ ಪೊಲೀಸ್ ಠಾಣೆಗೆ ಹಾಜರುಪಡಿಸುವಂತೆ ಅಲ್ಲಿದ್ದ ಪಂಚರಿಗೆ, ಸಾರ್ವಜನಿಕರಿಗೆ ಹಾಗೂ ಅಲ್ಲಿನ ಪೊಲೀಸರಿಗೆ ತಿಳಿಸಿರುತ್ತೇನೆ.

5. 2 ನೇ ಆರೋಪಿಯ ಸ್ಥಿರ ಹಾಗೂ ಚರ ಆಸ್ತಿಯ ಕುರಿತು ಮಾಹಿತಿ ನೀಡುವಂತೆ ವರದಿಯನ್ನು ಕೋರಿದ್ದು ಅದರಂತೆ ಬೆಂಗಳೂರು ಪೂರ್ವ ತಾಲ್ಲೂಕಿನ ತಹಶೀಲ್ದಾರ್‌ರವರು 2 ನೇ ಆರೋಪಿಗೆ ಸಂಬಂಧಿಸಿದ ಯಾವುದೇ ಆಸ್ತಿ ಇಲ್ಲವೆಂದು ಸದರಿಯವರು ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

6. ಈ ಪ್ರಕರಣದಲ್ಲಿನ 2 ನೇ ಆರೋಪಿಯ ವಿರುದ್ಧ ನ್ಯಾಯಾಲಯದಿಂದ ಹೊರಡಿಸಲಾಗಿದ್ದ ಉದ್ಘೋಷಣಾ ವಾರೆಂಟನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಅದನ್ನು **ನಿಪಿ-3** ಎಂದು, ದಿನಾಂಕ 20.08.2018 ರ ಉದ್ಘೋಷಣಾ ಪಂಚನಾಮೆಯನ್ನು **ನಿಪಿ-4** ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ-4(ಎ),** 2 ನೇ ಆರೋಪಿಗೆ ಸಂಬಂಧಿಸಿದಂತೆ ಬೆಂಗಳೂರು ಪೂರ್ವ ತಾಲ್ಲೂಕಿನ ತಹಶೀಲ್ದಾರ್‌ರವರು ನೀಡಿರುವ

ವರದಿಯನ್ನು ನಿಪಿ-5 ಎಂದು ಗುರುತಿಸಲಾಯಿತು.

7. ಪ್ರಸ್ತುತ ಪ್ರಕರಣದಲ್ಲಿ ನ್ಯಾಯಾಲಯದಿಂದ 1ನೇ ಆರೋಪಿ ಗಣೇಶ್ ಬಿನ್ ರಾಮಯ್ಯರವರ ವಿರುದ್ಧ ಉದ್ಘೋಷಣಾ ವಾರಂಟ್ ಜಾರಿ ಮಾಡುವ ಸಂಬಂಧ ನಮ್ಮ ಪಿ.ಎಸ್.ಐ ರವರ ಆದೇಶದ ಮೇರೆಗೆ ದಿನಾಂಕ 20.08.2018 ರಂದು ಬೆಂಗಳೂರು, ಹೆಬ್ಬಾಳ, ಕೆಂಪಾಪುರ ಜನತಾ ಕಾಲೋನಿಯ 3ನೇ ಕ್ರಾಸ್‌ನಲ್ಲಿರುವ 1ನೇ ಆರೋಪಿಯ ತಂದೆಯ ಮನೆಯ ಹತ್ತಿರ ಆರೋಪಿಯ ತಂದೆಯ ಸಮಕ್ಷಮ ಮುನಿಕೃಷ್ಣಪ್ಪ ಬಿನ್ ಬಾಲಪ್ಪ, ರಫೀಕ್ ಬಿನ್ ಇಸ್ಮಾಯಿಲ್ ಎಂಬ ಪಂಚರನ್ನು ಬರಮಾಡಿಕೊಂಡು ಉದ್ಘೋಷಣಾ ವಿಚಾರವನ್ನು ತಿಳಿಸಿ, ಸ್ಥಳದಲ್ಲಿ ಬೆಳಗ್ಗೆ 8.00 ಗಂಟೆಯಿಂದ 10.00 ಗಂಟೆಯವರೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತೇನೆ. ಆ ಸಮಯದಲ್ಲಿ 1ನೇ ಆರೋಪಿಯ ತಂದೆ ಹಾಜರಿದ್ದು, ತನ್ನ ಮಗನಾದ 1ನೇ ಆರೋಪಿ ಕುಡಿತದ ಚಟವನ್ನು ಹೊಂದಿದ್ದು ಆತನ ಇರುವಿಕೆಯ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲವೆಂದು ತಿಳಿಸಿದ್ದು, ಆತನ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಉದ್ಘೋಷಣಾ ಪ್ರತಿಯನ್ನು ತೆಗೆದುಕೊಂಡು ಟಾಂ ಟಾಂ ಮೂಲಕ ಸ್ಥಳೀಯರಿಗೆ ಪ್ರಚಾರಪಡಿಸಿ ಉದ್ಘೋಷಣಾ ಪ್ರತಿಯನ್ನು ಅಂಗನವಾಡಿ ಕೇಂದ್ರ, ದೇವಸ್ಥಾನದ ಮುಂಭಾಗ ಹಾಗೂ ಬಸ್ ನಿಲ್ದಾಣಗಳಲ್ಲಿ ಅಂಟಿಸಿ 1ನೇ ಆರೋಪಿ ಪತ್ತೆಯಾದ ಪಕ್ಷದಲ್ಲಿ ದಿನಾಂಕ 20.09.2018 ರಂದು ಆತನನ್ನು ನ್ಯಾಯಾಲಯಕ್ಕೆ ಅಥವಾ ನಮ್ಮ ಪೊಲೀಸ್ ಠಾಣೆಗೆ ಹಾಜರುಪಡಿಸುವಂತೆ ಅಲ್ಲಿದ್ದ ಪಂಚರಿಗೆ, ಸಾರ್ವಜನಿಕರಿಗೆ ಹಾಗೂ ಅಲ್ಲಿನ ಪೊಲೀಸರಿಗೆ ತಿಳಿಸಿರುತ್ತೇನೆ.

8. 1ನೇ ಆರೋಪಿಯ ಸ್ಥಿರ ಹಾಗೂ ಚರ ಆಸ್ತಿಯ ಕುರಿತು ಮಾಹಿತಿ ನೀಡುವಂತೆ ವರದಿಯನ್ನು ಕೋರಿದ್ದು ಅದರಂತೆ ಸಹಾಯಕ ಕಂದಾಯ

ಅಧಿಕಾರಿ, ಕೊಡಿಗೆಹಳ್ಳಿ ಉಪವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸದರಿ ಆರೋಪಿಗೆ ಸಂಬಂಧಿಸಿದ ಯಾವುದೇ ಆಸ್ತಿ ಇಲ್ಲವೆಂದು ಸದರಿಯವರು ಹಿಂಬರಹವನ್ನು ನೀಡಿರುತ್ತಾರೆ.

9. ಈ ಪ್ರಕರಣದಲ್ಲಿನ 1ನೇ ಆರೋಪಿಯ ವಿರುದ್ಧ ನ್ಯಾಯಾಲಯದಿಂದ ಹೊರಡಿಸಲಾಗಿದ್ದ ಉದ್ಘೋಷಣಾ ವಾರೆಂಟನ್ನು ನೋಡುತ್ತಿದ್ದು ಗುರುತಿಸುತ್ತೇನೆ. ಅದನ್ನು **ನಿಪಿ-6** ಎಂದು, ನಾನು ಸಲ್ಲಿಸಿರುವ ವರದಿಯನ್ನು ನಿಪಿ-7, ಉದ್ಘೋಷಣಾ ಪಂಚನಾಮೆಯನ್ನು **ನಿಪಿ-8** ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ-8(ಎ)** ಎಂದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನೀಡಲಾದ ವರದಿಯನ್ನು **ನಿಪಿ-9**, 1ನೇ ಆರೋಪಿಯ ತಂದೆ ನೀಡಿರುವ ಹೇಳಿಕೆಯನ್ನು ನಿಪಿ-10, ಅದರಲ್ಲಿನ ಸಹಿಯನ್ನು **ನಿಪಿ-10(ಎ)** ಎಂದು ಗುರುತಿಸಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಸರಸ್ವತಿ ಕೆ.ಎನ್.)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.